ಘಟಪ್ರಭಾ ನದಿಯನ್ನು ಕಾಲುವೆ ಎಂದು ಪರಿಗಣಿಸಿ ನೀರೆತ್ತಲು ಮಂಜುರಾತಿ

2452 - ಶ್ರೀ ಬಾಬಾಗೌಡ ಪಾಟೀಲ (ಕಿತ್ತೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಹಿಡಕಲ್ ಜಲಾಶಯದಿಂದ ಕೊಣ್ಣೂರ್ ಬಾಂದರಾದವ್‌ರ್‌ಗೆ ನದಿಯನ್ನೇ ಕಾಲುವೆಯೆಂದು ನೀರೆತ್ತಲು ಮಂಜೂರಾತಿ ಕೊಡುತ್ತಿಲ್ಲವೆಂಬುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ಇದೇ ಹಾದಿಯಲ್ಲಿ ಹಿರಣ್ಯಕೇಶಿ ನದಿಯು ಘಟಪ್ರಭಾಕ್ಕೆ ಬಂದು ಕೂಡುತ್ತಿರುವುದರಿಂದ ನೀರೆತ್ತಲು ಮಂಜೂರಾತಿ ನೀಡದೇ ಇರುವುದು ನ್ಯಾಯಸಮ್ಮತವೆ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ತಿಳಿದಿದೆ

ಆ) ಹಿಡಕಲ್ ಜನಾಶಯದಿಂದ ಘಟಪ್ರಭಾ ಎಡದಂಡೆ ಕಾಲುವೆಯ ಅಚ್ಚುಕಟ್ಟಿಗಾಗಿ ಸೆಪ್ಟೆಂಬರ್ ಅಕ್ಟೋಬರ್ ತಿಂಗಳಲ್ಲಿ ನದಿಗೆ ನೀರು ಬಿಡಲಾಗುವುದು ನದಿಯ ಈ ರೀಚಿನಲ್ಲಿ ನೀರೆತ್ತಲು ಪರವಾನಾಗಿ ಕೊಟ್ಟಿಲ್ಲ ಘಟಪ್ರಭಾ ಎಡದಂಡೆ ಕಾಲುವೆಯಡಿ ಬರುವ ಅಚ್ಚುಕಟ್ಟಿಗೆ ನೀರಿನ ಕೊರತೆ ವುಂಟಾಗುವುದಲ್ಲದೇ ಹತ್ತಿರದ ಗ್ರಾಮಗಳಿಗೆ ಕುಡಿಯುವ ನೀರಿನ ಅಭಾವ ವುಂಟಾಗಬಹುದಾದ್ದರಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಮಹಾದಾಯಿ ಯೋಜನೆಯಿಂದ ಸೌಲಭ್ಯ

2455 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಮಹಾದಾಯಿ ಯೋಜನೆಯಿಂದ ಯಾವ ಯಾವ ತಾಲ್ಲೂಕ್‌ಗಳಿಗೆ ನೀರಾವರಿ ಸೌಲಭ್ಯ ಆಗುತ್ತಿದೆ.

ಆ) ಈ ಯೋಜನೆಗೆ 1991-92ರ ಆಯವ್ಯಯದಲ್ಲಿ ಎಷ್ಟು ಹಣ ತೆಗೆದಿರಿಸಲಾಗಿದೆ?

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಈ ಯೋಜನೆಯಿಂದ ಮಲಪ್ರಭಯೋಜನೆಯ ಜಲಾಶಯಕ್ಕೆ 9 ಟಿ.ಎಂ.ಸಿ. ಪ್ರಮಾಣದ ನೀರನ್ನು ಪೂರೈಸುವುದೇ ಹೊರತು ಇದರಡಿ ಹೊಸ ಅಚ್ಚುಕಟ್ಟು ಬರುವುದಿಲ್ಲ.

ಆ) 1991-92ನೇ ಸಾಲಿನಲ್ಲಿ ಆಯವ್ಯಯದಲ್ಲಿ ಈ ಯೋಜನೆಗೆ ಹಣ ಒದಗಿಸಿರುವುದಿಲ್ಲ.

ಉಳ್ಳಾಲ ಕಡಲು ಕೊರೆತದ ಭೀಕರತೆಯ ಕುರಿತು

2481 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ದಕ್ಷಿಣ ಕನ್ನಡದ ಉಳ್ಳಾಲದಲ್ಲಿ ಕಳೆದ 4 ವರ್ಷಗಳಿಂದ ಕಡಲು ಕೊರೆತ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ, ಮುಖ್ಯವಾಗಿ ಈ ವರ್ಷ ಕಡಲು ಕೊರತ ಭೀಕರವಾಗಿರುವುದನ್ನು ಸರ್ಕಾರ ಪರಿಶೀಲನೆ ಮಾಡಿದೆಯೆ;